**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 133/2019 ಸಿ.ಡಬ್ಲ್ಯೂ -೧ ಪಿ.ಡಬ್ಲ್ಯೂ -೧

| | | |
|---|---|---|
| ಹೆಸರು | ಃ | ವಸೀಮ್ |
| ತಂದೆಃ ಗಂಡ | ಃ | ಮುಸ್ತಫ್ ಅನ್ಸಾರಿ |
| ವಯಸ್ಸು | ಃ | ೪೧ ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | ಃ | ಆಳಂದ |

ದಿನಾಂಕಃ ೩೦.೧೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಕಲಂ ೨೯೯ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆ:**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ರವರ ಪರಿಚಯ ಇರುವುದಿಲ್ಲ. ಚಾಸಾ-೪ ನನ್ನ ತಂದೆ, ಚಾಸಾ-೫ ನನ್ನ ತಾಯಿ, ಚಾಸಾ-೬, ೭ ನನ್ನ ಸಹೋದರರು, ಚಾಸಾ-೮ ನನ್ನ ಸೋದರ ಮಾವ, ಚಾಸಾ-೧೦ ನನ್ನ ಸೋದರ ಮಾವ, ಚಾಸಾ-೧೧ ನನ್ನ ಸಹೋದರಿ, ಚಾಸಾ-೨, ೩, ೯ ರವರ ಪರಿಚಯ ಇರುತ್ತದೆ. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ತಕರಾರು ಇರುವುದಿಲ್ಲ, ಆರೋಪಿತರು ನನಗೆ, ಚಾಸಾ-೪, ೬, ೭ ರವರಿಗೆ ಹೊಡೆ ಬಡೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಮ್ಮ ಮನೆ ಕಡೆಗೆ ಕಲ್ಲು ತೂರಿರುವುದಿಲ್ಲ, ಮುಖ್ಯ ಬಾಗಿಲಿಗೆ ಮತ್ತು ಗೇಟಿಗೆ, ಲೈಟಿಗೆ ದ್ವಿ ಚಕ್ರವಾಹನಕ್ಕೆ ಕಲ್ಲು ಒಗೆದಿರುವುದಿಲ್ಲ, ನಮ್ಮ ಯಾವುದೇ ಆಸ್ತಿಯನ್ನು ಹಾಳು ಮಾಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಫಿರ್ಯಾದಿ ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಒಂದು ದಾಖಲೆಗೆ ಸಹಿ ಮಾಡು ಎಂದು ಸಹಿ ಮಾಡಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-೧ ಎಂದು, ಸಹಿಯನ್ನು ನಿಪಿ-೧(ಎ) ಗುರುತಿಸಲಾಯಿತು. ರಾಜಿಯಾಗಿರುತ್ತೇವೆ, ಪ್ರಕರಣವನ್ನು ಮುಂದುವರೆಸುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಈಗ ಓದಿ ಹೇಳಿದ ಹಾಗೆ ನಾನು ಪೋಲಿಸರಿಗೆ ಫಿರ್ಯಾದಿಯನ್ನು ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಈಗ ಓದಿ ಹೇಳಿದ ಹಾಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಗೆ ವ್ಯತಿರಿಕ್ತವಾಗಿ ನುಡಿದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ-೨ ಎಂದು ಗುರುತಿಸಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ